ಓ.ಎಸ್. ನಂಃ **65/2015**<br>ಪಿ <u>ಡಬ್ಲ್ಯೂಃ **2**</u>

ದಿನಾಂಕಃ 05-07-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **2** ರಿಂದ **4** ಮತ್ತು **6** ನೇ ಪ್ರತಿವಾದಿಯರ ಪರವಾಗಿ ಶ್ರೀ ಎಂ ಎಂ ಕೆ ವಕೀಲರಿಂದಃ</u>

ನನಗೆ ಓದಲು-ಬರೆಯಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ಈ ದಾವೆಯಲ್ಲಿ ಪಕ್ಷಗಾರನಾಗಿಲ್ಲ ಎಂದರೆ ಸರಿ. ನಿಮ್ಮ ತಂದೆಗೆ ಏನಾಗಿದೆ ಎಂದರೆ ಸಾಕ್ಷಿಯು ರಸ್ತೆ ಅಪಘಾತದಲ್ಲಿ ಕಾಲಿಗೆ ಪಟ್ಟಾಗಿದೆ ಮತ್ತು ಅವರಿಗೆ ಕಿವಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾಗಿರುವುದನ್ನು ತೋರಿಸಲು ನಾನು ದಾಖಲಾತಿ ಹಾಜರು ಮಾಡಿಲ್ಲ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇದೆ. ಎರಡು ಜಮೀನುಗಳಿಗ ಸಂಬಂಧಿಸಿದಂತೆ ನನ್ನ ತಂದೆ ಈ ದಾವೆ ದಾಖಲು ಮಾಡಿದ್ದಾರೆ. ಸರ್ವೆ ನಂಬರುಗಳು 63 ಮತ್ತು 998 ರ ಜಮೀನುಗಳಿಗೆ ಸಂಬಂಧಿಸಿದಂತೆ ದಾವೆ ದಾಖಲು ಮಾಡಿದ್ದಾರೆ. ದಾವಾ ಜಮೀನುಗಳ ಕ್ಷೇತ್ರ 02 ಎಕರೆ 18 ಗುಂಟೆ ಮತ್ತು 30 ಗುಂಟೆ ಇರುತ್ತದೆ.

2. ನನ್ನ ತಂದೆ ದುರ್ಗಪ್ಪ ರವರ ಮಗ ಆಗಿರುತ್ತಾನೆ ಎಂದರೆ ಸರಿ. ಸದರಿ ನನ್ನ ತಾತ ದುರ್ಗಪ್ಪ ರವರ ತಂದೆಯ ಹೆಸರು ಭೀಮಪ್ಪ ಎಂದು ಇತ್ತು. ನನ್ನ ಮುತ್ತಾತ ಭೀಮಪ್ಪ ರವರ ತಂದೆಯ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆಯ ಹೆಸರು ರಾಮಣ್ಣ ಎಂದು ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯ ಗಂಡನ ಹೆಸರು ಆಶಪ್ಪ ಎಂದು ಇರುತ್ತದೆ ಎಂದರೆ ಸರಿ. ಸದರಿ ರಾಮಣ್ಣ ಮತ್ತು ಆಶಪ್ಪ ರವರು ಸಾಬಣ್ಣನ ಮಕ್ಕಳು ಆಗಿರುತ್ತಾರೆ ಎಂದರೆ ಸರಿ. ಸದರಿ ಸಾಬಣ್ಣರವರು ಚಂದಪ್ಪನ ಮಗ ಆಗಿದ್ದರು ಎಂದರೆ ಸರಿ. ನನಗೆ ಚಂದಪ್ಪನ ತಂದೆಯ ಹೆಸರು ಗೊತ್ತಿಲ್ಲ. ಸದರಿ ಚಂದಪ್ಪ ಹಾಗೂ ನನ್ನ ತಾತನ ತಂದೆ ಬೇರೆ ಬೇರೆ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿ.

3. ನನ್ನ ತಾತ ದುರ್ಗಪ್ಪ ರವರಿಗೆ ಒಟ್ಟು 06 ಜನ ಮಕ್ಕಳು ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಪೈಕಿ ಇಬ್ಬರು ಮರಣಹೊಂದಿದ್ದಾರೆ ಎಂದು

ನುಡಿಯುತ್ತಾರೆ. ದುರ್ಗಪ್ಪನ ಹೆಣ್ಣು ಮಕ್ಕಳಾದ ನನ್ನ ಅತ್ತೆಯಂದಿರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ಮಕ್ಕಳು ಇಲ್ಲ ಎಂದರೆ ಸಾಕ್ಷಿಯು ಒಬ್ಬ ಮಗಳು ಇದ್ದಾಳೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಮಗಳ ಹೆಸರು ಸಹ ಆಶಮ್ಮ ಎಂದು ಇರುತ್ತದೆ. ಸದರಿ 1 ನೇ ಪ್ರತಿವಾದಿಯ ಮಗಳನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಅವರು ಈಗಾಗಲೇ ಮರಣಹೊಂದಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಮಗಳನ್ನು ದೇವರಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿದೆ. ಅವರಿಗೆ ಯಾವುದೇ ಮಕ್ಕಳು ಇರುವುದಿಲ್ಲ. 1 ನೇ ಪ್ರತಿವಾದಿಯ ಮಗಳು ಆಶಮ್ಮ ರವರಿಗೆ ಮಕ್ಕಳು ಇಲ್ಲ ಎಂಬುದನ್ನು ವಾದ ಪತ್ರ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ.

4. 2 ನೇ ಪ್ರತಿವಾದಿಯ ಗಂಡ ಆಶಪ್ಪ ರವರು 1 ನೇ ಪ್ರತಿವಾದಿಯ ಚಿಕ್ಕಪ್ಪ ಆಗಿರುತ್ತಾರೆ ಎಂದರೆ ಸಾಕ್ಷಿಯು ಸಮಂಜಸ ಉತ್ತರ ನೀಡದೇ ನಾವು ಆಶಮ್ಮನ ವಿರುದ್ಧ ದಾವೆ ದಾಖಲಿಸಿದ್ದೇವೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಆಸ್ತಿಗಳ ಮಾಲಿಕರಾಗಿರುತ್ತಾರೆ ಎಂದರೆ ಸಾಕ್ಷಿಯು ನಮಗೂ ಪಾಲು ಬರಬೇಕು, ನಮಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯರು ತಮ್ಮ ಹೆಸರಿಗೆ ಮಾಡಿಕೊಂಡಿರುವ ವಿಷಯ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ನನ್ನ ತಂದೆಗೂ ಹಾಗೂ ದಾವಾ ಆಸ್ತಿಗೂ ಯಾವುದೇ ಸಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತ ದುರ್ಗಪ್ಪ ನನ್ನ ಮುತ್ತಾತ ಭೀಮಪ್ಪ ರವರ ಕುಟುಂಬಕ್ಕೆ ಸೇರಿರುತ್ತಾರೆ ಎಂದರೆ ಸರಿ. ನನ್ನ ತಂದೆಗೂ ಹಾಗೂ ಚಂದಪ್ಪ ರವರ ಕುಟುಂಬಕ್ಕೂ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೂ ಹಾಗೂ ನಿಮ್ಮ ತಂದೆಗೂ ಹೇಗೆ ಸಂಬಂಧ ಎಂದರೆ ಸಾಕ್ಷಿಯು ಅಣ್ಣ-ತಮ್ಮಂದಿರು ಆಗಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿಯರಿಗೆ ಸೇರಿದ್ದು ನಮಗೆ ದಾವೆ ದಾಖಲಿಸಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

5. ನಮ್ಮ ತಂದೆಗೆ ಗಡ್ಡೆ ಹೊಲ ಎಂಬ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದರ ಮೇಲೆಯೇ ಈ ದಾವೆ ನಡೆಯುತ್ತಿದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಸರ್ವೆ ನಂ.63 ಮತ್ತು 998 ಇರುತ್ತದೆ. ಸದರಿ ಗಡ್ಡೆ ಹೊಲ 32 ಗುಂಟೆ ಇತ್ತು ಎಂದರೆ ಸಾಕ್ಷಿಯು 02 ಎಕರೆ 18 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಸದರಿ ಕ್ಷೇತ್ರವನ್ನು ನಿಮ್ಮ ಪ್ರಮಾಣ ಪತ್ರದಲ್ಲಿ ಬೆರಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿರಬಹುದು ಎಂದು ನುಡಿಯುತ್ತಾರೆ. ಸದರಿ ಗಡ್ಡೆ ಹೊಲ ಅಂದರೆ 32 ಗುಂಟೆ ಜಮೀನನ್ನು ನಿಮ್ಮ ತಂದೆ ದಿನಾಂಕ 27.05.1994 ರಂದು ರೂ.25 ಸಾವಿರಗಳಿಗೆ 2 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಚಾಪಾ ಕಾಗದದ ಮೇಲೆ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಹಾಗೂ ನಾವು ಯಾರು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಕನ್ನಡದಲ್ಲಿ ಸಹಿ ಮಾಡುತ್ತಾರೆ. ಸಾಕ್ಷಿಗೆ ಈಗ ದಿನಾಂಕ 27.05.1994 ರ ನೊಂದಾಯಿತವಲ್ಲದ ಖರೀದಿ ಪತ್ರದಲ್ಲಿನ ಸಾಯಿಬಣ್ಣ ಎಂಬ ಸಹಿಯನ್ನು ತೋರಿಸಿ ಅದು ನಿಮ್ಮ ತಂದೆಯ ಸಹಿ ಆಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಸರಿ ಎಂದು ನುಡಿಯುತ್ತಾರೆ. ಆದರೆ ಸದರಿ ಖರೀದಿ ಪತ್ರ ನೊಂದಣಿ ಆಗದಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

6. ನಮ್ಮ ಗ್ರಾಮದ ಬುಡ್ಡಪ್ಪ ಎಂಬಾತ ಈಗಾಗಲೇ ಮರಣಹೊಂದಿದ್ದಾರೆ. ಲಚಮಪ್ಪ ಬೋಯಿನ್ ಎಂಬಾತ ಸಹ ನಮ್ಮ ಗ್ರಾಮದವರಾಗಿದ್ದು ಈಗಾಗಲೆ ಮರಣಹೊಂದಿರುತ್ತಾರೆ. ಹಣಮಪ್ಪ ಸುಂಕಾರ್ ಎಂಬಾತ ಸಹ ನಮ್ಮ ಗ್ರಾಮದವರಾಗಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾನು ಆತನನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ನಾಗಪ್ಪ ಇಟಕಲ್ ಎಂಬಾತ ಸಹ ನಮ್ಮ ಗ್ರಾಮದವರಾಗಿದ್ದು ಈಗಾಗಲೆ ಮರಣಹೊಂದಿರುತ್ತಾರೆ. ತಿಮ್ಮಪ್ಪ ಸುಂಕಾರ್ ಎಂಬಾತ ಸಹ ನಮ್ಮ ಗ್ರಾಮದವರಾಗಿದ್ದು ಈಗಾಗಲೆ ಮರಣಹೊಂದಿರುತ್ತಾರೆ. ಬಸಪ್ಪ ಕೋಟರಿಕಿ ಎಂಬಾತ ಸಹ ನಮ್ಮ ಗ್ರಾಮದವರಾಗಿದ್ದು ಈಗಾಗಲೆ ಮರಣಹೊಂದಿರುತ್ತಾರೆ. ಭೀಮಪ್ಪ ಬೊಯಿನ್ ಎಂಬಾತ ಸಹ ನಮ್ಮ ಗ್ರಾಮದವರಾಗಿದ್ದು ಈಗಾಗಲೆ ಮರಣಹೊಂದಿರುತ್ತಾರೆ. ನರಸಪ್ಪ ಮೇಲಗಿರಿ ಎಂಬಾತ ಸಹ ನಮ್ಮ ಗ್ರಾಮದವರಾಗಿದ್ದು ಈಗಾಗಲೆ

ಮರಣಹೊಂದಿರುತ್ತಾರೆ. ನನಗೆ ಬುಗ್ಗಪ್ಪ ತಳವಾರ ಎಂಬಾತನ ಪರಿಚಯ ಇಲ್ಲ. ನಿಮ್ಮ ತಂದೆ ಈ ಮೇಲಿನ ಎಲ್ಲರ ಸಮಕ್ಷಮ ಹಣ ಪಡೆದುಕೊಂಡು 2 ನೇ ಪ್ರತಿವಾದಿಯ ಗಂಡನಿಗೆ 1994 ರಲ್ಲಿ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನಾನು ಆಗ ಚಿಕ್ಕವನಿದ್ದೆನು, ಇದೆಲ್ಲ ಸುಳ್ಳು ಎಂದು ನುಡಿಯುತ್ತಾರೆ. ಆಗ ನಿಮಗೆ ಎಷ್ಟು ವಯಸ್ಸು ಆಗಿತ್ತು ಎಂದರೆ ಸಾಕ್ಷಿಯು 10 ವರುಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ಈಗ ನನಗೆ 40 ವರ್ಷ ವಯಸ್ಸಾಗಿರಬಹುದು. ನಿಮ್ಮ ತಂದೆ ಖರೀದಿ ಪತ್ರ ಬರೆದುಕೊಟ್ಟಿದ್ದು ಆತ ಸಾಕ್ಷ ನುಡಿಯುವದರಿಂದ ನಿಜಾಂಶ ಗೊತ್ತಾಗುತ್ತದೆ ಎಂದು ನಿಮ್ಮ ಸಾಕ್ಷ ಹೇಳಿಕೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ರಸ್ತೆ ಅಪಘಾತವಾಗಿದೆ ಹಾಗೂ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ.

7. ಚಂದಪ್ಪ ಹಾಗೂ ಭೀಮಪ್ಪನ ತಂದೆ ಮತ್ತು ಅಣ್ಣ-ತಮ್ಮಂದಿರ ನಡುವೆ ಬಹಳ ಹಿಂದೆಯೇ ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ಚಂದಪ್ಪ ಮತ್ತು ಭೀಮಪ್ಪ ವಿಭಾಗ ಮಾಡಿಕೊಂಡಿರುವುದು ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗಾಗಲೇ ವಿಭಾಗವಾಗಿದ್ದು, ಭೀಮಪ್ಪನ ಆಸ್ತಿಯೇ ಬೇರೆ ಹಾಗೂ ಚಂದಪ್ಪನ ಆಸ್ತಿಯೇ ಬೇರೆ ಇರುತ್ತದೆ ಎಂದರೆ ಸಾಕ್ಷಿಯು ಭೀಮಪ್ಪನ ಆಸ್ತಿಯಲ್ಲಿ ಪಾಲು ಬೇಕೆಂದು ದಾವೆ ದಾಖಲಿಸಿದ್ದೇವೆ ಎಂದು ನುಡಿಯುತ್ತಾರೆ. ಅಂದರೆ ಆಶಪ್ಪ ತಂದೆ ಸಾಬಣ್ಣನ ಆಸ್ತಿಗೂ ಮತ್ತು ನಿಮಗೂ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಅದೆಲ್ಲ ಗೊತ್ತಿಲ್ಲ, ನಮಗೆ ಪಾಲು ಬೇಕು ಎಂದು ನುಡಿಯುತ್ತಾರೆ. ನನ್ನ ತಂದೆ ತಮ್ಮ ಪಾಲಿಗೆ ಬಂದ 32 ಗುಂಟೆ ಗಡ್ಡೆ ಹೊಲವನ್ನು ಈಗಾಗಲೇ ಮಾರಾಟ ಮಾಡಿರುವುದರಿಂದ ನಮಗೆ ವಿಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1994-95 ರಿಂದ 1 ಮತ್ತು 2 ನೇ ಪ್ರತಿವಾದಿಯರೇ ಸದರಿ ಜಮೀನು ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾಡಿದ್ದಾರೆ ಎಂದು ನುಡಿಯುತ್ತಾರೆ.

8. ದಾವಾ ಸರ್ವೆ ನಂ.63/ಆ ಜಮೀನನ್ನು 2 ನೇ ಪ್ರತಿವಾದಿ 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನಮಗೆ ಗೊತಿತಲ್ಲದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಂತರ ಸದರಿ ಜಮೀನನ್ನು 12 ನೇ ಪ್ರತಿವಾದಿ 13 ನೇ ಪರತಿವಾದಿಗೆ

ಮಾರಾಟ ಮಾಡಿದ್ದಾರೆ ಎಂದರೆ ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ಎಲ್ಲಾ ವಿಷಯ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>**12** ನೇ ಪ್ರತಿವಾದಿ ಪರ ಶ್ರೀ ಎಂ ಬಿ ಪಿ ವಕೀಲರಿಂದ ಪಾಟೀ ಸವಾಲುಃ</u>

9. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬುರವುದಿಲ್ಲ. ನಿಮ್ಮ ಸಾಕ್ಷ ಪ್ರಮಾಣ ಪತರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನಾನು ಕಂದಾಯ ಅಧಿಕಾರಿಗಳಿಂದ ಪಡೆದ ವಂಶಾವಳಿ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಸರ್ವೆ ನಂ.63/ಎ ರ 02 ಎಕರೆ 18 ಗುಂಟೆ ಜಮೀನು ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.63/ಆ ರ 32 ಗುಂಟೆ ಜಮೀನು ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳ ಸರ್ವೆ ನಂಬರು ಈಗ 63/ಅ ಮತ್ತು 63/2 ಎಂದು ಬದಲಾಗಿದೆ ಎಂದೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಜಮೀನುಗಳ ಮಾಲಿಕರಾಗಿದ್ದು ಅವುಗಳನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬರುತ್ತಿರುವುದು ನಿಮಗೆ ಯಾವಾಗ ಗೊತ್ತಾಗಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತೇ ಆಗಿಲ್ಲ ಎಂದು ನುಡಿಯುತ್ತಾರೆ. ನಂತರ ಖರೀದಿ ಪತ್ರದ ಪ್ರಕಾರ 12 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಹಕ್ಕು ಬದಲಾವಣೆಯನ್ನು ಕಂದಾಯು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಈ ದಾವೆ ದಾಖಲು ಮಡಿದ್ದೇವೆ ಎಂದು ನುಡಿಯುತ್ತಾರೆ. ನಂತರ 12 ನೇ ಪ್ರತಿವಾದಿ ದಾವಾ ಅನಸೂಚಿ 02 ಎಕರೆ 18 ಗುಂಟೆ ಜಮೀನನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ಪ್ರಕಾರ ಖರೀದಿದಾರರ ದಾವಾ ಜಮೀನುಗಳ ಮಾಲಿಕರು ಮತ್ತು ಕಬ್ಜೆದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ.

10 ದಾವಾ ಜಮೀನುಗಳು ನಿಮ್ಮ ತಂದೆಗೆ ಸೇರಿರುತ್ತದೆ ಎಂಬುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗಣೇಶ ಎಂದರೆ ಯಾರು ಎಂಬುದು ನಿಮಗೆ ಗೊತ್ತಿದೆಯೇಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಹೆಸರಿನಲ್ಲಿ ಇರುವ ಪಂಚಾಯಿತಿ ನಂಬರು 1547ರ ಮನೆಯನ್ನು ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿಯು ಮನೆಯ ಪಂಚಾಯಿತಿ ನಂ.203 ಮತ್ತು 205 ಇರುತ್ತದೆ ಎಂದು ನುಡಿಯುತ್ತಾರೆ. 12 ಮತ್ತು 13ನೇ ಪ್ರತಿವಾದಿಯರು ದಾವಾ ಜಮೀನುಗಳ ಮಾಲಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರನ್ನು ಸತಾಯಿಸಲು ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಗೂ ಹಾಗೂ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇಲ್ಲ ಹಾಗೂ ಆತ ಯಾವತ್ತು ಅವುಗಳ ಮಾಲಿಕ ಮತ್ತು ಕಬ್ಜೆದಾರ ಆಗಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ